ಹುಡುಗ, ಡ್ರೆಸ್ಸಿಂಗ್ ಟೇಬಲಿನ ಮೇಲಿಂದ ಕನ್ನಡಿಯನ್ನು ಕಿತ್ತು ತಂದು ಡ್ರಿಯೋಲಿಯ ಬೆನ್ನ ಮೇಲೆ ಹಿಡಿದು ಅವನ ಕತ್ತನ್ನು ಒರಟಾಗಿ ತಿರುಗಿಸಿ ನೋಡಲು ಹೇಳಿದ.

"ಓಹ್ ಮೈ ಜೀಸಸ್!" ಡ್ರಿಯೋಲಿ ಆಶ್ಚರ್ಯದಿಂದ ಉಲಿದ! ಅವನ ಬೆನ್ನು ತಲೆ ಬುಡದಿಂದ ಬೆನ್ನಿನ ಬುಡದವರೆಗೆ ವಿವಿಧ ವರ್ಣಗಳಿಂದ ತುಂಬಿ ಹೋಗಿತ್ತು. ತೈಲ ವರ್ಣದ ಮಾದರಿಯಂತೆಯೇ ಅವನು ಬಣ್ಣಗಳನ್ನು ಬಳಸಿದ್ದ. ತೆಳುವಾಗಿ, ಗಾಢವಾಗಿ, ಬೆನ್ನು ಮೂಳೆ ಎದ್ದು ಕಾಣುವಂತೆ, ಭುಜದ ಮೂಳೆಗಳು ಎದ್ದು ಕಾಣದಂತೆ ಬಳಸಿದ್ದ. ಕೈ ಸ್ಪರ್ಶ ಮಾತ್ರದಿಂದಲೇ ಸಂತೆಯಲ್ಲೋ ಜಾತ್ರೆಯಲ್ಲೋ ಜನಸಾಮಾನ್ಯರು ಹುಯ್ಯಿಸಿಕೊಳ್ಳುತ್ತಿದ್ದ ಹಚ್ಚೆಯನ್ನು ಹುಡುಗ ಕಲಾದರ್ಜೆಗೆ ಏರಿಸಿದ್ದ! ಹುಡುಗ ಸೂಟಿನ್, ರಚಿಸಿದ್ದ ಎಷ್ಟೋ ಭಾವಚಿತ್ರಗಳಂತೆ ಇದೂ ಕೂಡ ಜೀವಂತವಾಗಿರುವಂತೆ ಕಾಣಿಸುತ್ತಿತ್ತು. ಚಿತ್ರದಲ್ಲಿ ಜೋಸಿಯ ಆ ಕ್ಷಣದ ನೋವಿನ, ಉದಾಸದ, ನಶೆಯ ನಿದ್ದೆಯಿಂದ ಹಣ್ಣಾದ ಭಾವವು ಕ್ಯಾಮೆರಾದೊಳಗೆ ಸೆರೆಯಾದಂತೆ ಎದ್ದು ಕಾಣುತ್ತಿತ್ತು.

"ಲೋ, ಮಗಾ... ಅದ್ಭುತ! ಅತ್ಯದ್ಭುತ!!" ಅವನು ಮತ್ತೆ ಮತ್ತೆ ಉದ್ಗರಿಸಿದ.

"ನನಗೂ ಹಾಗೇ ಅನ್ನಿಸುತ್ತಿದೆ. ನಾನು ಧೈರ್ಯವಾಗಿ ಇದರ ಮೇಲೆ ನನ್ನ ಸಹಿ ಮಾಡಬಹುದು." ಎಂದು ಅವನು ಮತ್ತೊಮ್ಮೆ ಟ್ಯಾಟೂ ಮಶೀನನ್ನು ಕೈಗೆತ್ತಿಕೊಂಡು ಡ್ರಿಯೋಲಿಯ ಬಲಭಾಗದ, ಅಂದರೆ ಕಿಡ್ನಿಯ ಜಾಗದ ತುಸು ಮೇಲೆ ಕೆಂಪುಶಾಯಿಯಿಂದ ಸಹಿ ಮಾಡಿದ.

ಕನ್ನಡಿಯೊಳಗೇ ಮುಖ ತೂರಿಸಿಕೊಂಡಿದ್ದ ಡ್ರಿಯೋಲಿ ಈ ಜಗತ್ತಿನಲ್ಲಿರಲಿಲ್ಲ...

...ಡ್ರಿಯೋಲಿ, ಮೊದಲನೇ ಮಹಾಯುದ್ಧದಲ್ಲಿ ಭಾಗವಹಿಸಿ ವಾಪಸ್ಸು ಬಂದಾಗ ಹುಡುಗ ನಾಪತ್ತೆಯಾಗಿದ್ದ. ಅವನು ಹುಡುಗನ ಬಗ್ಗೆ ಮಡದಿ ಜೋಸಿಯ ಬಳಿ ವಿಚಾರಿಸಿದ. ಯಾರೋ ಕಲಾವ್ಯಾಪಾರಿ ಚಿತ್ರಗಳನ್ನು ಬಿಡಿಸಲು ಹುಡುಗನನ್ನು ಕ್ರೀಟ್ ನಾಡಿಗೆ ಕರೆದೊಯ್ದಿದ್ದಾನೆಂದು ಅವಳಿಂದ ತಿಳಿದು ಬಂತು.

''ಅವನು ಖಂಡಿತಾ ವಾಪಸ್ಸು ಬರುತ್ತಾನೆ." ಡ್ರಿಯೋಲಿ ಹೇಳಿದ. ಅದಾದ ಕೆಲ ತಿಂಗಳುಗಳ ಬಳಿಕ ಅವನೂ ಹೊಟ್ಟೆಪಾಡಿಗೆ ಬೇರೊಂದು ನಗರವನ್ನು ಸೇರಿದ. ಹೊಸ ಊರು ಬಂದರು ನಗರವಾದ್ದರಿಂದ ಡ್ರಿಯೋಲಿಗೆ ಹೊಸ ಹೊಸ ಗಿರಾಕಿಗಳು ಸಿಗತೊಡಗಿದರು. ಎರಡು ಮಹಾಯುದ್ಧಗಳ ನಡುವಿನ ಆ ಕಾಲ ಡ್ರಿಯೋಲಿಯ ಪಾಲಿಗೆ ನೆಮ್ಮದಿಯ ಕಾಲವಾಗಿತ್ತು.

ಒಂದು ದಿನ ಮಹಾಯುದ್ಧ ಶುರುವಾಗಿಯೇ ಬಿಟ್ಟಿತು. ಜೋಸಿಯ ಹತ್ಯೆಯಾಯಿತು. ಮೈಮೇಲೆ ಹಚ್ಚೆ ಹುಯ್ಯಿಸಿಕೊಳ್ಳುವ ಆಸಕ್ತಿ ಯಾರಿಗೂ ಇಲ್ಲದಾಯಿತು. ಡ್ರಿಯೋಲಿಯನ್ನು ಕೇಳುವವರಿಲ್ಲದಾಯಿತು. ಬದುಕುವುದೇ ಕಷ್ಟವಾಯಿತು. ಡ್ರಿಯೋಲಿ ಮತ್ತೆ ಪ್ಯಾರಿಸಿಗೆ ವಾಪಸ್ಸಾದ. ಮಹಾನಗರದಲ್ಲಿ ಹೇಗೂ ಜೀವನ ಸಾಗಿಸಬಹುದೆಂಬ ಅವನ ನಿರೀಕ್ಷೆ ಸುಳ್ಳಾಯಿತು.

ಯುದ್ಧ ಮುಗಿದ ಅನಂತರ ಮತ್ತೆ ಬದುಕನ್ನು ಕಟ್ಟಿಕೊಳ್ಳುವ ಚೈತನ್ಯ ಅವನಲ್ಲಿ ಉಡುಗಿ ಹೋಗಿತ್ತು. ಭಿಕ್ಷೆ ಬೇಡಲು ತಯಾರಿಲ್ಲದ ಅವನಿಗೆ ಘನತೆಯಿಂದ ಬದುಕುವುದೇ ದುಸ್ತರವಾಗತೊಡಗಿತು.

ಅವನು ಕಿಟಕಿಯಿಂದ ಆ ಪೇಂಟಿಂಗ್ ಅನ್ನು ನೋಡುತ್ತಲೇ ಇದ್ದ. 'ನನ್ನ ಕಾಲ್ಮುಕ್ ಹುಡುಗನ ಚಿತ್ರ!' ಅವನ ಮನಸ್ಸು ಪ್ರಫುಲ್ಲವಾಗತೊಡಗಿತು. ಹಳೆ ನೆನಪುಗಳು ಒಂದೊಂದಾಗಿ ಮನೋಪಟಲದ ಮೇಲೆ ಮೂಡತೊಡಗಿದವು. ಆ ಕ್ಷಣದಲ್ಲಿ ಅವನಿಗೆ ತನ್ನ ಬೆನ್ನಿನ ಮೇಲೆ ಹುಡುಗ ಬಿಡಿಸಿದ ಟ್ಯಾಟೂ ಚಿತ್ರವಿರುವುದು ನೆನಪಿಗೆ ಬಂದಿತು. ಅಲ್ಲೀವರೆಗೆ ಅವನು ಅದನ್ನು ಮರೆತೇ ಬಿಟ್ಟಿದ್ದ. ಅವನು ತೀಕ್ಷ್ಣವಾಗಿ ಮತ್ತೊಮ್ಮೆ ಸೂಟಿನನ ಚಿತ್ರವನ್ನು, ಹಾಗೆಯೇ ಗ್ಯಾಲರಿಯೊಳಗೆ ಕಣ್ಣಾಡಿಸಿದ. ಗೋಡೆಯ ಮೇಲೆ ಸೂಟಿನನ ಇನ್ನೂ ಅನೇಕ ಚಿತ್ರಗಳು ತೂಗಾಡುತ್ತಿದ್ದವು. ಅದು ಏಕ ಕಲಾಕಾರನ ವಿಶೇಷ ಚಿತ್ರ ಪ್ರದರ್ಶನವಾಗಿರುವಂತೆ ಕಾಣಿಸುತ್ತಿತ್ತು.